# ಆಧುನಿಕ ಭಾರತೀಯ ಜ್ಞಾನ ಪ್ರಸರಣ ವ್ಯವಸ್ಥೆಯಲ್ಲಿ ಶಿಕ್ಷಣ ಸಮಿತಿಗಳ ಪಾತ್ರ

**ಡಾ. ದೀಕ್ಷಿತ್ ಕುಮಾರ್ ಎಂ.**
ಸಹಾಯಕ ಪ್ರಾಧ್ಯಾಪಕ
ರಾಜ್ಯಶಾಸ್ತ್ರ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ)
ಬೆಂಗಳೂರು – 560077.
deekshithkumarm85@gmail.com

**Article Link: https://aksharasurya.com/2023/05/deekshith-kumar-m/**

**ಸಾರಾಂಶ:**

ಸಾಂಪ್ರದಾಯಿಕ ಭಾರತೀಯ ಜ್ಞಾನ ವಿಕಸನ ಸ್ಪಷ್ಟ ರೂಪರೇಷಗಳು ಇಂದು ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಿರ್ಧರಿಸಲ್ಪಡುತ್ತಿರುವುದು ಆಧುನಿಕ ಜ್ಞಾನ ಪ್ರಸರಣದ ಒಂದು ಅವಿಚ್ಛಿನ್ನ ಹಂತವಾಗಿದೆ. ಐತಿಹಾಸಿಕ ಬೆಳವಣಿಗೆಯಿಂದ ರೂಪಿತವಾದ ಮಾನವಜೀವನದ ವೈಚಾರಿಕತೆಯ ಹಲವು ರೂಪಗಳ ಸಮ್ಮಿಳಿತದ ಕೇಂದ್ರಬಿಂದು ಶಿಕ್ಷಣ ಕ್ಷೇತ್ರ ಇಂದು ವ್ಯವಸ್ಥಿತ ಚೌಕಟ್ಟಿಗೆ ಒಳಪಟ್ಟಿರುವುದಾಗಿದೆ. ಭಾರತೀಯ ಸಮಾಜದ ಹಲವು ಜ್ಞಾನ ಪ್ರಕಾರಗಳ ಉಷಾಕಿರಣದ ಅವಿಭಾಜ್ಯ ಅಂಗವೇ ಆಧುನಿಕ ಶಿಕ್ಷಣ ಸಮಿತಿಗಳು. ಅನಾಗರೀಕ ಸಮಾಜದಿಂದ ನಾಗ–ರಿಕತೆಯೆಡೆಗೆ ನಡೆದ ಈ ಜ್ಞಾನದ ಹರಿವು ಪಟ್ಟಿಯಲ್ಲಿ ಭಾರತ ಘನ ಸರ್ಕಾರ ಶಿಕ್ಷಣ ಸಮಿತಿಗಳ ನೇಮಕದ ಮೂಲಕ ಕೈಗೊಂಡ ಕೆಲವು ನಿರ್ಣಾಯಕ ವಿಚಾರಗಳು ಮತ್ತು ಅದರ ಪ್ರಾಯೋಗಿಕತೆ ಪ್ರಸ್ತುತ ಭಾರತೀಯ ಸಮಾಜದ ವ್ಯವಸ್ಥಿತ ಜ್ಞಾನ ಪ್ರಸರಣದ ಉತ್ಕೃಷ್ಟತೆಯನ್ನು ಸಾರುವುದಾಗಿದೆ. ಉದಾಹರಣೆಗೆ; ರಾಧಾಕೃಷ್ಣ ಸಮಿತಿ, ಕೊಠಾರಿ ಸಮಿತಿ, ಮೊದಲಿಯಾರ್ ಸಮಿತಿ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಗಳು.

ಮೌಖಿಕ ಜ್ಞಾನ ಪ್ರಸರಣದ ಪ್ರಾರಂಭಿಕ ಹಂತವು ಸೀಮಿತ ಸಮುದಾಯದ ಮುಖ್ಯವಾಹಿನಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಭಾರತೀಯ ಸಮುದಾಯದ ಬೆಳವಣಿಗೆಯೊಂದಿಗೆ ಸಂಪೂರ್ಣ ನಾಗರೀಕ ಸಮಾಜವನ್ನು "ಸಾಹಿತ್ಯ" ಪ್ರಕಾರದ ಮೂಲಕ ಆವರಿಸಿಕೊಳ್ಳಲು ಪ್ರಾರಂಭಿಸಿದವು. ಪ್ರಮುಖವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯು ಪ್ರತಿಯೊಬ್ಬ ನಾಗರಿಕನಿಗೂ

ಸುಲಭವಾಗಿ ಮತ್ತು ಶೀಘ್ರವಾಗಿ ಜ್ಞಾನ ಪ್ರಸಾರವಾಗಲು ಕಾರಣವಾಯಿತು. ಇದು ಶಿಕ್ಷಣ ಕ್ಷೇತ್ರದ ಮೇಲೆ ಪ್ರಭಾವಿಸುವ ಮೂಲಕ ಜ್ಞಾನಪ್ರಸಾರದ ಅವಿಭಜಿತ ಅಂಗವಾಗಿ ಪ್ರಗತಿ ಹೊಂದಲು ಕಾರಣವಾಯಿತು. ಆದ್ದರಿಂದ ಆಧುನಿಕ ಭಾರತೀಯ ಜ್ಞಾನ ವ್ಯವಸ್ಥೆಯಲ್ಲಿ ಶಿಕ್ಷಣ ಸಮಿತಿಗಳು ನೀಡಿದ ವರದಿಗಳು ಮತ್ತು ಸುಧಾರಣೆಗಳು ನಾಗರೀಕ ಸಮಾಜವನ್ನು ಗರಿಷ್ಠಮಟ್ಟದಲ್ಲಿ ಜ್ಞಾನ ವ್ಯವಸ್ಥೆಯೊಳಗೆ ತರಲು ಸಾಧ್ಯವಾಯಿತು ಎಂಬುದನ್ನು ತಿಳಿಯೋಣ.

**ಮುಖ್ಯಪದಗಳು:**

ಜ್ಞಾನ ಪ್ರಸರಣ, ಜ್ಞಾನದ ಹರಿವು ಪಟ್ಟಿ, ಉತ್ಕೃಷ್ಟತೆ, ವಿಜ್ಞಾನ ಮತ್ತು ತಂತ್ರಜ್ಞಾನ, ನಾಗರೀಕ ಸಮಾಜ, ಶಿಕ್ಷಣ ನೀತಿಗಳು.

## ಪ್ರಸ್ತಾವನೆ:

'ನಾಗರೀಕತೆಯ ಕೇಂದ್ರ ಬಿಂದು ಜ್ಞಾನ', ಭಾರತೀಯ ನಾಗ–ರೀಕತೆಯು ಜ್ಞಾನ ಶಿಕ್ಷಣದ ಬೆಳವಣಿಗೆಯೊಂದಿಗೆ ಗುರುತಿಸಿ ಕೊಂಡಿರುವುದಾಗಿದೆ, ಈ ನಿಟ್ಟಿನಲ್ಲಿ ಭಾರತೀಯ ಜ್ಞಾನ ಪ್ರಸರಣ ವ್ಯವಸ್ಥೆಯ ವಿಕಸನ ಆಧುನಿಕ ನಾಗರಿಕ ಸಮಾಜದ ವಿವಿಧ ಕ್ಷೇತ್ರಗಳ ಪ್ರಗತಿ ಮತ್ತು ಅಭಿವೃದ್ಧಿಯ ಅದ್ವಿತೀಯ ಕೊಡುಗೆಗಳಲ್ಲಿ ಒಂದಾಗಿರುವುದಾಗಿದೆ. ಭಾರತೀಯ ಜ್ಞಾನ ಪ್ರಸರಣದ ಮೂಲ ಆಕರಗಳು ಭಾಷಿಕ ಮತ್ತು ಸಾಹಿತ್ಯಕ ಪ್ರಕಾರಗಳಲ್ಲಿ ಕಂಡು ಬಂದಿರುವುದಾಗಿದೆ. ಭಾರತೀಯ ಸಮಾಜದ ವಿವಿಧ ಕಾಲಘಟ್ಟಗಳಲ್ಲಿ ಕಂಡುಬಂದಿರುವ ಹಲವು ಸಾಹಿತ್ಯಕ ಪ್ರಕಾರಗಳು ಮತ್ತು ದಾರ್ಶನಿಕರು, ತತ್ತ್ವಜ್ಞಾನಿಗಳು ನೀಡಿದ ಕೊಡುಗೆಗಳು ಭಾರತೀಯ ಜ್ಞಾನ ಪ್ರಸರಣ ಕ್ಷೇತ್ರವನ್ನು ಶ್ರೀಮಂತಗೊಳಿಸಿ ವಿಸ್ತರಿಸಿರುವುದಾಗಿದೆ. ಭಾರತೀಯ ನಾಗರೀಕ ಸಮಾಜದ ಬುದ್ಧಿಮತ್ತೆಯನ್ನು ಪ್ರಮಾಣೀಕರಿಸುವಲ್ಲಿ ಈ ಜ್ಞಾನ ಪ್ರಸಾರ ಒಂದು ಸಾಧನವಾಗಿ ಬೆಳವಣಿಗೆ ಹೊಂದಿದೆ. ಈ ಭಾರತೀಯ ಜ್ಞಾನ ಪ್ರಸರಣದ ವಿವಿಧ ಹಂತಗಳಲ್ಲಿ ನಾಗರಿಕ ಸಮಾಜ ಮತ್ತು ವಿವಿಧ ಸಂಘಟನೆಗಳು ನಿರ್ವಹಿಸಿದ ಕಾರ್ಯವೈಖರಿಯನ್ನು ಕೂಲಂಕುಶವಾಗಿ ಅಭ್ಯಸಿಸುವ ಹೊಣೆಗಾರಿಕೆ ಪ್ರಸ್ತುತ ನಾಗರೀಕ ಸಮಾಜದ ಗುರುತರವಾದ ಜವಾಬ್ದಾರಿಯಾಗಿದೆ.

ಈ ಭಾರತೀಯ ಜ್ಞಾನ ಪರಂಪರೆಯು ಸುಮಾರು 5000 ವರ್ಷಗಳ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವುದಾಗಿದೆ. ವೈದಿಕ ಪೂರ್ವ ಮತ್ತು

ವೈದಿಕೋತ್ತರ ಕಾಲಘಟ್ಟದಲ್ಲಿ ಕಂಡು ಬಂದಿರುವ ಲಿಖಿತ ರೂಪದ ಹಲವು ಸಾಹಿತ್ಯಗಳು ಮತ್ತು ಪ್ರಕಾರಗಳಾದ ಚತುರ್ವೇದ, ವೇದಾಂಗ, ಉಪನಿಷತ್, ರಾಮಾಯಣ–ಮಹಾಭಾರತ, ಮತ್ತು ಇತರೆ ಧರ್ಮಶಾಸ್ತ್ರಗಳಲ್ಲಿ ಭಾರತೀಯ ಜ್ಞಾನ ವಿಚಾರಧಾರೆಗಳ ಕುರುಹುಗಳನ್ನು ಅರಿಯಬಹುದಾಗಿದೆ. ವೇದೋತ್ತರ ಕಾಲದಲ್ಲಿ ಕಂಡುಬಂದ ಹಲವು ದಾರ್ಶನಿಕರು, ಚಿಂತಕರು ಮತ್ತು ಸಮಾಜ ಸುಧಾರಕರು ತಮ್ಮ ಚಿಂತನೆಗಳು ಮತ್ತು ವಿಚಾರಧಾರೆಗಳ ಮೂಲಕ ನಾಗರಿಕ ಸಮಾಜವನ್ನು ಜ್ಞಾನದ ಹೊಸ ದೀವಿಗೆಯಲ್ಲಿ ಕರೆದೊಯ್ಯಲು ಕಾರಣರಾದರು. ಹೀಗೆ ತತ್ವಜ್ಞಾನಿಗಳು ರಚಿಸಿದ ಗ್ರಂಥಗಳು ಭಾರತೀಯ ಜ್ಞಾನ ಪರಂಪರೆಯ ಪ್ರಭಾವಕ್ಕೊಳ ಪಟ್ಟ ವಿಶ್ಲೇಷಣಾ ಗ್ರಂಥಗಳಾಗಿ ಆಧುನಿಕ ಸಮಾಜದ ಜ್ಞಾನ ಬೇಡಿಕೆಗಳನ್ನು ಪೂರೈಸುವ ಮತ್ತು ಅದಕ್ಕೆ ಪೂರಕವಾದ ಮಾಹಿತಿಯನ್ನು ತಮ್ಮ ವಿಚಾರಧಾರೆಗಳಲ್ಲಿ ಮಿಳಿತಗೊಳಿಸಿ ಜ್ಞಾನ ಪ್ರಸರಣ ಕಾರ್ಯವನ್ನು ವ್ಯವಸ್ಥಿತವಾಗಿ ವಿಸ್ತೃತಗೊಳಿಸಲಾರಂಭಿಸಿದರು.

ಐತಿಹಾಸಿಕ ಭಾರತೀಯ ಸಮಾಜದಲ್ಲಿ ಆಳ್ವಿಕೆ ಮಾಡಿದ ಹಲವು ರಾಜಮನೆತನಗಳು ಮತ್ತು ಪಾಳೆಗಾರರು ಕಲೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು ನಾಗರಿಕ ಸಮಾಜದ ಲೌಕಿಕ ಮತ್ತು ಪಾರಮಾರ್ಥಿಕ ಕ್ಷೇತ್ರಗಳಲ್ಲಿ ಜನರ ಜ್ಞಾನದಾಹವನ್ನು ನೀಗಿಸುವಲ್ಲಿ ನೆರವಾದವು. ಪ್ರಮುಖವಾಗಿ ಐರೋಪ್ಯ ರಾಷ್ಟ್ರಗಳ ಆಗಮನ ಭಾರತೀಯ ಜ್ಞಾನ–ಪರಂಪರೆಯ ಬೆಳವಣಿಗೆಯಲ್ಲಿ ಜಗತ್ತಿನ ವಿವಿಧ ರಾಷ್ಟ್ರಗಳ ಸಂಸ್ಕೃತಿ, ಆಚಾರ–ವಿಚಾರಗಳು, ಕಲೆ, ಸಾಹಿತ್ಯ ಮತ್ತು ಇತರೇ ಕ್ಷೇತ್ರಗಳಲ್ಲಿ ಹೊಸ ಪ್ರಯೋಗಗಳು ನಡೆಯಲು ಅವಕಾಶ ನೀಡಲಾರಂಭಿಸಿದವು. ಭಾರತದಲ್ಲಿನ ಬ್ರಿಟಿಷ್ ರಾಜ್ಯ ವ್ಯವಸ್ಥೆ ಜಾರಿಗೆ ತಂದ ಹಲವು ಕಾಯ್ದೆ ಕಾನೂನುಗಳು, ಸುಧಾರಣೆಗಳು ಮತ್ತು ನೇಮಕಗೊಂಡ ವಿವಿಧ ಸಮಿತಿಗಳು ಭಾರತೀಯರ ವಿಚಾರಧಾರೆಗಳ ಎಲ್ಲೆಯನ್ನು ವಿಸ್ತೃತಗೊಳಿಸಲು ಸಹಕಾರಿಯಾದವು. ಇದರಿಂದಾಗಿಯೇ ಪಾಶ್ಚಿಮಾತ್ಯ ಜ್ಞಾನ ಪ್ರಸರಣ ವಿಚಾರಗಳ ಅರಿವು ಭಾರತೀಯ–ರಿಗುಂಟಾಗಲು ಕಾರಣವಾಯಿತು.

ಸ್ವಾತಂತ್ರ್ಯೋತ್ತರ ಭಾರತ ಆಗಲೇ ಹಲವು ಸಾಂಸ್ಕೃತಿಕ ವಿಲೀನಕರಣ–ಕೊಳಪಟ್ಟ ಬಹುಸಂಸ್ಕೃತಿಯಾಧಾರಿತ ಸಮಾಜವಾಗಿ ಮಾರ್ಪಾಡು ಹೊಂದಿದ್ದಿತು. ಇದರಿಂದಾಗಿ "ಜ್ಞಾನ ವಿಕಸನ" ಭಾರತೀಯ ಸಮಾಜದ ಮೂಲಮಂತ್ರವಾಗಿ ಬೆಳೆಯಲಾರಂಭಿಸಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಭಾರತೀಯ ಸಮಾಜ ವಿಶ್ವದಲ್ಲೇ ಗರಿಷ್ಠ ಮಟ್ಟದ ಸಾಹಿತ್ಯ ಪರಂಪರೆಯನ್ನು, ಸಾಹಿತ್ಯ ಕೃತಿಗಳು, ಗ್ರಂಥಗಳನ್ನು, ಬುದ್ಧಿ

ಜೀವಿಗಳನ್ನು ಮತ್ತು ಕ್ರಿಯಾಶೀಲ ನಾಗರಿಕ ಸಮಾಜವನ್ನು ಹೊಂದಿರುವ ಹೆಗ್ಗಳಿಕೆ ನಮ್ಮದಾಗಿದೆ. ಈ ನಿಟ್ಟಿನಲ್ಲಿ ಭಾರತೀಯ ಸಮಾಜದ ಅವಿಭಾಜ್ಯ ಅಂಗವಾಗಿ ಶಿಕ್ಷಣ ಕ್ಷೇತ್ರ ಕೈಗೊಂಡ ಹಲವು ಕ್ರಮಗಳು ಸುಧಾರಣೆಗಳು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನ ಪ್ರಕ್ರಿಯೆಗಳು ಆಧುನಿಕ ಭಾರತೀಯ ಜ್ಞಾನ ಪ್ರಸರಣ ವ್ಯವಸ್ಥೆಯನ್ನು ಬಲಿಷ್ಠಗೊಳಿಸಿರುವುದಾಗಿದೆ. ಶಿಕ್ಷಣ ಕ್ಷೇತ್ರದ ಅಂತಹ ಮಹತ್ವದ ಕಾರ್ಯವೈಕರಿಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನೇಮಕಗೊಂಡಂತಹ ಶಿಕ್ಷಣ ಸಮಿತಿಗಳು ಮತ್ತು ಅವುಗಳು ನೀಡಿದ ವರದಿಗಳನ್ನು ಆಧರಿಸಿ ಕೈಗೊಳ್ಳಲಾದ ಜ್ಞಾನ ಪ್ರಸಾರ ವ್ಯವಸ್ಥೆಯನ್ನು ಅರಿಯಬಹುದಾಗಿದೆ.

**ಅಧ್ಯಯನ ವಿಧಾನ:**

ಈ ಸಂಶೋಧನಾ ಲೇಖನ 'ಐತಿಹಾಸಿಕ ಮತ್ತು ವಿವರಣಾತ್ಮಕ' ಅಧ್ಯಯನ ವಿಧಾನವನ್ನು ಅಳವಡಿಸಿಕೊಂಡು ರಚಿತವಾಗಿರುವುದಾಗಿದೆ. ಪ್ರಸ್ತುತ ಈ ಅಧ್ಯಯನಕ್ಕೆ ಸಂಬಧಿಸಿದಂತಹ ಮಾಹಿತಿಗಳು ದ್ವಿತೀಯ ಆಕರಗಳನ್ನು ಆಧರಿಸಿ ಪಡೆದುಕೊಂಡಿರುವುದಾಗಿದೆ. ಸ್ವಾತಂತ್ರ್ಯೋತ್ತರ ಭಾರತ ಸರ್ಕಾರದಿಂದ ನೇಮಕಗೊಂಡ ಹಲವು ಶಿಕ್ಷಣ ಸಮಿತಿಗಳು ಮತ್ತು ಅವುಗಳು ನೀಡಿದ ವರದಿಗಳು ಹೇಗೆ ವೈಜ್ಞಾನಿಕವಾಗಿ ಭಾರತೀಯ ಜ್ಞಾನ ಪ್ರಸರಣ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಸಹಕಾರಿಯಾಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಪಾರಂಪರಿಕ ಮೌಲ್ಯಯುತ ಶಿಕ್ಷಣ ವ್ಯವಸ್ಥೆಯಲ್ಲಿನ ಜ್ಞಾನ ಪ್ರಸರಣದ ಹಲವು ಮಾದರಿಗಳು ಆಧುನಿಕ ಶಿಕ್ಷಣ ವ್ಯವಸ್ಥೆಯ ಕ್ರಮಗಳ ಮೇಲೆ ಬೀರಿರುವ ಪ್ರಭಾವವನ್ನು ಅರಿಯಲು ಈ ಅಧ್ಯಯನ ಸಹಕಾರಿಯಾಗಿದೆ.

**ಅಧ್ಯಯನದ ಉದ್ದೇಶಗಳು:**

1. ಭಾರತೀಯ ಜ್ಞಾನ ಪ್ರಸರಣದ ವಿಕಸನದ ಬಗ್ಗೆ ತಿಳಿಯುವುದಾಗಿದೆ
2. ಆಧುನಿಕ ಭಾರತೀಯ ಜ್ಞಾನ ಪ್ರಸರಣ ವ್ಯವಸ್ಥೆಯಲ್ಲಿನ ಹಲವು ಶಿಕ್ಷಣ ಸಮಿತಿಗಳ ವರದಿಗಳ ಅಧ್ಯಯನ.
3. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿನ ಜ್ಞಾನ ಪ್ರಸರಣ ವ್ಯವಸ್ಥೆ ಆಧುನಿಕ ಶಿಕ್ಷಣ ವ್ಯವಸ್ಥೆಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ವಿಶ್ಲೇಷಿಸುವುದಾಗಿದೆ.
4. ಆಧುನಿಕ ಶಿಕ್ಷಣ ಸಮಿತಿಗಳು ಭಾರತೀಯ ಜ್ಞಾನ ಪ್ರಸರಣ ವ್ಯವಸ್ಥೆಯ ಮೂಲಭೂತ ಘಟಕಗಳಾಗಿವೆ ಎಂಬುದನ್ನು ಮೌಲ್ಯೀಕರಿಸುವುದಾಗಿದೆ.

ಭಾರತೀಯ ನಾಗರಿಕ ಸಮಾಜದ ಬೆಳವಣಿಗೆಯು ಸಂಪೂರ್ಣ ಸಾಮಾಜಿಕ ಕ್ಷೇತ್ರದ ವಿವಿಧ ರಂಗಗಳ ಮೇಲೆ ಪ್ರಭಾವ ಬೀರುವ ಮೂಲಕ ಹೊಸ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಯತ್ತ ಸಾಗುತ್ತಿರುವುದಾಗಿದೆ. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಅಥವಾ ಗುರುಕುಲ ಪದ್ಧತಿಯಲ್ಲಿ ಕಂಡುಬರುತ್ತಿದ್ದ ಶೈಕ್ಷಣಿಕ ಚಟುವಟಿಕೆಗಳು ಶಿಕ್ಷಕ ಕೇಂದ್ರಿತವಾಗಿದ್ದಿತು. ಭಾರತೀಯ ಜ್ಞಾನ ಪರಂಪರೆಯ ಐತಿಹ್ಯವನ್ನು ಮೌಲ್ಯಗಳು, ಗ್ರಂಥಗಳು ಮತ್ತು ಆದರ್ಶಗಳ ಮೂಲಕ ಬೋಧಿಸಲಾಗುತ್ತಿತ್ತು. ಆದರೆ ಇಂದು ಶೈಕ್ಷಣಿಕ ಚಟುವಟಿ–ಕೆಗಳು ವಿದ್ಯಾರ್ಥಿ ಕೇಂದ್ರಿತವಾಗಿದ್ದು ವಿಭಿನ್ನವಾಗಿ ತಂತ್ರಜ್ಞಾನಾಧಾರಿತ ಸಾಧನಗಳ ಮೂಲಕ ನೆರವೇರುತ್ತಿರುವುದಾಗಿವೆ. ಈ ಹಿನ್ನೆಲೆಯಲ್ಲಿ ಆಧುನಿಕ ಶಿಕ್ಷಣ ಕ್ಷೇತ್ರದ ಬೆಳವಣಿಗೆಯು ತನ್ನದೇ ಆದ ರಚನಾತ್ಮಕ ಕಾರ್ಯವೈಖರಿಯ ಮೂಲಕ ಜ್ಞಾನದ ಹೊಸ ದಿಕ್ಕನ್ನು ವ್ಯವಸ್ಥಿತವಾಗಿ ರೂಪಿಸಲು ಸಹಕಾರಿಯಾಗಿದೆ. ನಾಗರೀಕ ಸಮಾಜ ನಿರ್ಮಿತ ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯಗಳು ಎಂಬ ಶೈಕ್ಷಣಿಕ ವ್ಯವಸ್ಥೆ ಒಂದು ವ್ಯವಸ್ಥಿತ ಚೌಕಟ್ಟಿನಲ್ಲಿ ಉತ್ತಮ ಜ್ಞಾನ ಪ್ರಸರಣದ ಸಾಧನಗಳಾಗಿ ವ್ಯಕ್ತಿಯ ವ್ಯಕ್ತಿತ್ವ ವಿಕಸನದ ಬೆಳವಣಿಗೆಯಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸುತ್ತಿದೆ. ಇಂದಿನ ಆಧುನಿಕ ಶಿಕ್ಷಣ ಪದ್ಧತಿ ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತವಾಗಿದ್ದರೂ ಸಹ ಅದರ ಪ್ರಾಥಮಿಕ ಉದ್ದೇಶ ಜ್ಞಾನ ಪ್ರಸರಣ. ಈ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಜ್ಞಾನ ಪ್ರಸಾರದ ಅಸ್ವರೂಪ ಪ್ರಕ್ರಿಯೆಗಳು ಇಂದು ವ್ಯವಸ್ಥಿತ ರೂಪದಲ್ಲಿ ವಿವಿಧ ಸಾಧನ ಮತ್ತು ತಂತ್ರಾಂಶಗಳ ಮೂಲಕ ನಾಗರಿಕ ಸಮಾಜವನ್ನು ತಲುಪುತ್ತಿರುವುದು ಭಾರತೀಯ ಜ್ಞಾನ ಪ್ರಸರಣದ ಕ್ರಿಯಾಶೀಲ ಪಾತ್ರವನ್ನು ತಿಳಿಯಬಹುದಾಗಿದೆ. ಈ ನಿಟ್ಟಿನಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನೇಮಕಗೊಂಡ ಹಲವಾರು ಶಿಕ್ಷಣ ಸಮಿತಿಗಳು ಜ್ಞಾನಪ್ರಸಾರದ ಸ್ಪಷ್ಟ ರೂಪುರೇಷೆಗಳನ್ನು ರಚಿಸಿ ಅದನ್ನು ಗರಿಷ್ಟ ಪ್ರಮಾಣದಲ್ಲಿ ವಿಸ್ತರಿಸಿ ಭಾರತೀಯ ಜ್ಞಾನ ಪರಂಪರೆಯ ಶ್ರೀಮಂತಿಕೆಯನ್ನು ಮತ್ತು ಪ್ರೌಢಿಮೆಯನ್ನು ಮತ್ತಷ್ಟು ಹೆಚ್ಚಿಸುತ್ತಿರುವುದಾಗಿದೆ. ಅಂತಹ ಕೆಲವು ಪ್ರಮುಖ ಶಿಕ್ಷಣ ಸಮಿತಿಗಳು ಮತ್ತು ವರದಿಗಳೆಂದರೆ;

ಸ್ವತಂತ್ರ ಭಾರತದ ಅತ್ಯಂತ ಪ್ರಮುಖ ಮೊದಲ ಶಿಕ್ಷಣ ಸಮಿತಿ 1948 ರ ವಿಶ್ವವಿದ್ಯಾಲಯ ಶಿಕ್ಷಣ ಸಮಿತಿ, ಡಾ. ಎಸ್. ರಾಧಾಕೃಷ್ಣನ್ ರವರ ನೇತೃತ್ವದಲ್ಲಿ ರಚಿಸಲ್ಪಟ್ಟಿತ್ತು. ಈ ಸಮಿತಿ ಭಾರತೀಯ ವಿಶ್ವವಿದ್ಯಾಲಯ ಶಿಕ್ಷಣ, ಸುಧಾರಣೆಗಳು ಮತ್ತು ವಿಸ್ತರಣೆಗಳ ಸ್ಥಿತಿಯ ಬಗ್ಗೆ ವರದಿ ಮಾಡಲು ಹಾಗೂ 1948 ರಲ್ಲಿ ಉನ್ನತ ಶಿಕ್ಷಣದ ಗುರಿಗಳು ಮತ್ತು ಉದ್ದೇಶಗಳನ್ನು ನಿರೂಪಿಸವ ಪ್ರಮುಖ ಹೆಗ್ಗುರುತಾಗಿದೆ.

ಈ ಸಮಿತಿಯು ಪ್ರಜಾಸತ್ತಾತ್ಮಕ ಮೌಲ್ಯಗಳು ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸಲು ಅಗತ್ಯ ಕ್ರಮಗಳನ್ನು ಕೈಗೊಂಡಿತು. ವಿವಿಧ ಸಾಮಾಜಿಕ ಕ್ಷೇತ್ರಗಳಾದ ರಾಜಕೀಯ, ಆಡಳಿತಾತ್ಮಕ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಕ್ಷೇತ್ರಗಳಲ್ಲಿ ವ್ಯಕ್ತಿತ್ವ ವಿಕಸನ ಬೆಳವಣಿಗೆಗೆ ಅವಕಾಶ ಮಾಡುವುದು. ಈ ಸಮಿತಿಯು ಜ್ಞಾನ ಮತ್ತು ಬುದ್ಧಿವಂತಿಕೆಯನ್ನು ಒದಗಿಸುವ ವಿಶ್ವವಿದ್ಯಾಲಯಗಳನ್ನು ಭವಿಷ್ಯತ್ತಿನಲ್ಲಿ ಸ್ಥಾಪಿಸುವ ಗುರಿಯನ್ನು ಹೊಂದಿತ್ತು. ಹೀಗೆ ಈ ಸಮಿತಿಯು ಪ್ರಮುಖವಾಗಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಇರುವಂತಹ ಸಮಸ್ಯೆಗಳನ್ನು ಆಧರಿಸಿ ಸೂಕ್ತ ಪರಿಹಾರೋಪಾಯಗಳನ್ನು ನೀಡಿರುವುದಾಗಿದೆ.

ಸ್ವತಂತ್ರ ಭಾರತದ ಎರಡನೆಯ ಪ್ರಮುಖ ಶಿಕ್ಷಣ ಸಮಿತಿ ರಾಷ್ಟ್ರೀಯ ಶಿಕ್ಷಣ ಸಮಿತಿ 1964 ರಲ್ಲಿ ರಚನೆಗೊಂಡಿತು. ಇದನ್ನು ಕೊಠಾರಿ ಸಮಿತಿ ಎಂದು ಕರೆಯಲಾಗುತ್ತದೆ. ಭಾರತ ಘನ ಸರ್ಕಾರ ಈ ಸಮಿತಿಯನ್ನು ಶಿಕ್ಷಣ ಕ್ಷೇತ್ರದ ವಿವಿಧ ರಂಗಗಳನ್ನು ಪರೀಕ್ಷಿಸಲು ಮತ್ತು ಸಾಮಾನ್ಯ ತತ್ವಗಳನ್ನು ಅಳವಡಿಸಿಕೊಳ್ಳಲು ಹಾಗೂ ಸುಧಾರಿತ ಶಿಕ್ಷಣ ಕ್ರಮಗಳ ಬೆಳವಣಿಗೆಗೆ ಸೂಕ್ತ ನೀತಿಗಳನ್ನು ರಚಿಸಲು ನೇಮಿಸಲಾಯಿತು. ಪ್ರಮುಖವಾಗಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಿಂದ ಉನ್ನತ ಶಿಕ್ಷಣದವರೆಗೂ ಏಕರೂಪ ರಾಷ್ಟ್ರೀಯ ನೀತಿಗಳನ್ನು ಜಾರಿಗೊಳಿಸಲು ಮುಂದಾಗಿದ್ದಿತ್ತು, ಆದರೆ ವೈದ್ಯಕೀಯ ಮತ್ತು ಕಾನೂನು ಅಧ್ಯಯನ ಇದರ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಆಚಾರ್ಯ ನರೇಂದ್ರ ದೇವ್ ಸಮಿತಿ ಶಿಕ್ಷಣ ಸಂಘಟನೆಗಳಲ್ಲಿ ರಾಜಕೀಯ ಮತ್ತು ಸಂವಿಧಾನಾತ್ಮಕ ಸ್ಥಿತಿಗತಿಗಳನ್ನು ಆಧರಿಸಿದ ಬೆಳವಣಿಗೆಗೆ ಕಾರಣವಾದ ವಿಚಾರಗಳನ್ನು ಅರಿಯಲು ಸಹಕಾರಿಯಾಯಿತು. ಈ ಸಮಿತಿಯು ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ಕಂಡುಬಂದಂತಹ ನ್ಯೂನ್ಯತೆಗಳು ಮತ್ತು ಅವುಗಳ ಬದಲೀ ಪರಿಣಾಮಕಾರಿ ಅಂಶಗಳ ಬಳಕೆಯ ಸುಧಾರಣೆಗಳನ್ನು ಕಂಡುಹಿಡಿಯಲು ಮುಂದಾಯಿತು. ಆನಂತರದಲ್ಲಿ ರಚನೆಯಾದ ಮತ್ತೊಂದು ಪ್ರಮುಖ ಸಮಿತಿ ಎಂದರೆ ಮಾಧ್ಯಮಿಕ ಶಿಕ್ಷಣ ಸಮಿತಿ ಇದನ್ನು ಮೊದಲಿಯರ್ ಸಮಿತಿ ಎಂದು ಸಹ ಕರೆಯಲಾಗುತ್ತದೆ. ಈ ಸಮಿತಿಯ ನೇಮಕದ ಪ್ರಮುಖ ಉದ್ದೇಶ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿನ ಪರಿಣಾಮಕಾರಿ ಸುಧಾರಣೆಗಳ ಅನುಷ್ಠಾನ ಮತ್ತು ಸದ್ಬಳಕೆಗೆ ಸೂಕ್ತ ಸಾಧನಗಳ ಅನಿವಾರ್ಯತೆಯನ್ನು ತಿಳಿಸುವುದಾಗಿದೆ.

ಆಧುನಿಕ ನಾಗರಿಕ ಸಮಾಜದ ಮತ್ತೊಂದು ಪ್ರಮುಖ ಶಿಕ್ಷಣ ಸಮಿತಿ

ರಾಷ್ಟ್ರೀಯ ಶಿಕ್ಷಣ ನೀತಿ 1986 ಈ ಸಮಿತಿಯನ್ನು ಅಂದಿನ ಪ್ರಧಾನಮಂತ್ರಿ ರಾಜೀವ್ ಗಾಂಧಿಯವರು ಜಾರಿಗೆ ತಂದರು. ಈ ಸಮಿತಿಯ ಪ್ರಾಥಮಿಕ ಉದ್ದೇಶ ಶಿಕ್ಷಣ ಕ್ಷೇತ್ರಗಳಲ್ಲಿನ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಮಹಿಳೆ, ಹಿಂದುಳಿದ ಮತ್ತು ದಮನಿತ ವರ್ಗದವರ ಸಮಾನ ಶಿಕ್ಷಣಾಭ್ಯಾಸಕ್ಕೆ ಸೂಕ್ತ ಅವಕಾಶ ಒದಗಿಸುವುದಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದರ ಸಲುವಾಗಿ ಮುಕ್ತ ವಿಶ್ವವಿದ್ಯಾಲಯಗಳನ್ನು ಉನ್ನತ ಶಿಕ್ಷಣಕ್ಕಾಗಿ ಮೀಸಲಿರಿಸಿ ಪ್ರಥಮಬಾರಿಗೆ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವನ್ನು 1985 ರಲ್ಲಿ ಸ್ಥಾಪಿಸಲಾಯಿತು. ಈ ಶಿಕ್ಷಣ ಸಮಿತಿಯ ಮತ್ತೊಂದು ಪ್ರಮುಖ ನಿರ್ಣಯ ವೆಂದರೆ 'ವಿದ್ಯಾರ್ಥಿ ಕೇಂದ್ರಿತ ಬೋಧನೆ' ಮತ್ತು 'ಕಪ್ಪುಹಲಗೆ ಯೋಜನೆಯನ್ನು' ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ವಿಸ್ತರಿಸಲಾಯಿತು.

ಆಧುನಿಕ ಭಾರತದ ಮಹತ್ವಕಾರಿ ಶಿಕ್ಷಣ ಯೋಜನೆಗಳಲ್ಲಿ ಸ್ಥಾಪಿಸಲ್ಪಟ್ಟ 'ರಾಷ್ಟ್ರೀಯ ಜ್ಞಾನ ಆಯೋಗ' 2015 ಒಂದು ಮಹತ್ವವಾದ ಕೊಡುಗೆಯನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಲು ಸಹಕಾರಿಯಾಗಿದೆ. ಶಿಕ್ಷಣ ಕ್ಷೇತ್ರದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮತ್ತು ಶಿಕ್ಷಣ ಸೇವಾ ಕ್ಷೇತ್ರದ ವಿಸ್ತರಣೆಯಲ್ಲಿ ಬುದ್ಧಿಜೀವಿಗಳ ವಿಚಾರಗಳನ್ನು ಸಂಯೋಜಿಸಿ ಆಧರಿಸಿದ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಈ ಸಮಿತಿ ಕಾರ್ಯನಿರ್ವಹಿಸಿರುವುದಾಗಿದೆ. ಈ ಸಮಿತಿಯ ಪ್ರಾಥಮಿಕ ಉದ್ದೇಶ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ವಿಸ್ತರಿಸುವುದು. ಇದರ ಸಲುವಾಗಿ ಹಲವು ಕೇಂದ್ರ ವಿಶ್ವವಿದ್ಯಾಲಯಗಳನ್ನು ಸುಮಾರು 1000 ರಾಷ್ಟ್ರೀಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಮತ್ತು ಅವುಗಳಿಗೆ ಬೇಕಾದ ಮೂಲಭೂತ ಸವಲತ್ತುಗಳನ್ನು ಸಕಾಲದಲ್ಲಿ ಒದಗಿಸುವುದಾಗಿದೆ. ಈ ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ಅರ್ಹತೆಯನ್ನು ಹೊಂದಿದಂತಹ ಕೌಶಲ್ಯಾಧಾರಿತ ಉಪನ್ಯಾಸಕರುಗಳನ್ನು ನೇಮಕ ಮಾಡುವುದು ಹಾಗೂ ಶಿಕ್ಷಣ ಚಟುವಟಿಕೆಗಳನ್ನು ಕಾಲಕಾಲಕ್ಕೆ ಮೇಲ್ವಿಚಾರಣೆ ಮಾಡಲು ಅಗತ್ಯ ನಿಯಂತ್ರಣ ಪ್ರಾಧಿಕಾರಗಳನ್ನು ಸ್ಥಾಪಿಸುವುದಾಗಿದೆ.

ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಬಹಳಷ್ಟು ಚರ್ಚಾಸ್ಪದವಾದ, ಇತ್ತೀಚೆಗಷ್ಟೇ ಸ್ಥಾಪಿಸಲ್ಪಟ್ಟ ರಾಷ್ಟ್ರೀಯ ಶಿಕ್ಷಣ ನೀತಿ 2020 ಮತ್ತು ಅದರ ಕಾರ್ಯಚಟುವಟಿಕೆ ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲಾಗಿದೆ. ಈ ಶಿಕ್ಷಣ ನೀತಿ ಭಾರತೀಯ ಇತಿಹಾಸದ ಸಾಂಪ್ರದಾಯಿಕ ಶಿಕ್ಷಣ ಪ್ರಕ್ರಿಯೆಗಳನ್ನು ನವೀಕರಿಸಿ ಆಧುನಿಕ ಶೈಲಿಯ ತಂತ್ರಜ್ಞಾನಾಧಾರಿತ ವ್ಯವಸ್ಥೆಯಾಗಿ ರೂಪುಗೊಂಡಿರುವುದಾಗಿದೆ. ಈ ಶಿಕ್ಷಣ ನೀತಿ ಪ್ರಕ್ರಿಯೆಯು ವಿಶಿಷ್ಟ, ವಿನೂತನ

ಮತ್ತು ವ್ಯಕ್ತಿತ್ವ ವಿಕಸನದ ಅಂಶಗಳನ್ನು ಆಧರಿಸಿ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ವ್ಯವಸ್ಥೆಯನ್ನು ಪ್ರತಿಪಾದಿಸುವುದಾಗಿದೆ. ವಿದ್ಯಾರ್ಥಿ ಕೇಂದ್ರಿತ ಬಹುಶಿಸ್ತೀಯ ವಿಷಯಗಳ ಅಧ್ಯಯನಕ್ಕೆ ಆದ್ಯತೆ ನೀಡಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವುದಾಗಿದೆ.

ಈ ಮೇಲ್ಕಂಡ ಎಲ್ಲಾ ಪ್ರಮುಖ ಶಿಕ್ಷಣ ಸಮಿತಿಗಳ ವರದಿಗಳು ಮತ್ತು ಶಿಫಾರಸ್ಸುಗಳು ಆಧುನಿಕ ನಾಗರಿಕ ಸಮಾಜದ ಸಾಂಸ್ಥಿಕ ರೂಪದ ಜ್ಞಾನಪ್ರಸರಣದ ನಿರ್ಧಾರಕ ಅಂಶಗಳಾಗಿವೆ ಎಂದರೆ ತಪ್ಪಾಗಲಾರದು. ಆದ್ದರಿಂದ ಈ ಕೆಳಕಂಡ ಅಂಶಗಳು ಆಧುನಿಕ ಭಾರತೀಯ ಜ್ಞಾನ ಪ್ರಸರಣ ವ್ಯವಸ್ಥೆಯ ಬೆಳವಣಿಗೆಯಲ್ಲಿ ಶಿಕ್ಷಣ ಸಮಿತಿಗಳ ಪಾತ್ರವನ್ನು ತಿಳಿಸುವುದಾಗಿದೆ.

1. ರಾಷ್ಟ್ರೀಯ ಶಿಕ್ಷಣ ಸಮಿತಿಗಳು ಸಾಂಸ್ಥಿಕ ರೂಪಾಧಾರಿತ ಶಿಕ್ಷಣ ಸಂಸ್ಥೆಗಳ ಮೂಲಕ ಜ್ಞಾನ ಪ್ರಸರಣ ಪ್ರಕ್ರಿಯೆಯನ್ನು ಕೈಗೊಳ್ಳುತ್ತಿರುವುದಾಗಿದೆ.

2. ಶಿಕ್ಷಣ ಸಮಿತಿಗಳ ಸುಧಾರಿತ ಶೈಕ್ಷಣಿಕ ಚಟುವಟಿಕೆಗಳ ವರದಿಗಳು ಮಾನವನ ಜ್ಞಾನವಿಕಸನದಲ್ಲಿ ಹೊಸ ಚೈತನ್ಯವನ್ನು ಮೂಡಿಸಿರುವುದಾಗಿದೆ.

3. ಆಧುನಿಕ ಭಾರತೀಯ ಶಿಕ್ಷಣ ಸಮಿತಿಗಳ ಕ್ರಿಯಾಶೀಲ ಅಧ್ಯಯನ ವರದಿಗಳು ಸಾಂಪ್ರದಾಯಿಕ ಭಾರತೀಯ ಜ್ಞಾನಪ್ರಸರಣದ ಸಾಹಿತ್ಯದಂತೆ ಗುರುತಿಸಿಕೊಂಡಿರುವುದಾಗಿದೆ.

4. ಶಿಕ್ಷಣ ಕ್ಷೇತ್ರವು ಆಧುನಿಕ ಭಾರತೀಯ ಜ್ಞಾನ ವ್ಯವಸ್ಥೆಯ ಕೇಂದ್ರ ಬಿಂದುವಾಗಿದ್ದು ಮಾನವ ನಾಗರಿಕತೆಯ ವಿವಿಧ ಮಜಲುಗಳ ಅಧ್ಯಯನಕ್ಕೆ ಸಹಕಾರಿಯಾಗಿದೆ.

5. ಸಾಂಪ್ರದಾಯಿಕ ಮತ್ತು ಆಧುನಿಕ ಶಿಕ್ಷಣ ಕ್ಷೇತ್ರಗಳ ಕೂಲಂಕುಷ ಅಧ್ಯಯನಗಳು ನಾಗರಿಕ ಸಮಾಜದ ವಿನೂತನ ಜ್ಞಾನಪ್ರಸಾರದ ಮೂಲಾಧಾರಗಳಾಗಿವೆ.

6. ಶಿಕ್ಷಣ ಕ್ಷೇತ್ರದಲ್ಲಿನ ಹಲವು ಸಮಿತಿಗಳ ವರದಿಗಳು, ಕ್ರಿಯಾ ಯೋಜನೆಗಳು, ಸಂಶೋಧನಾ ಗ್ರಂಥಗಳು, ಬೋಧನಾ ವಿಧಾನಗಳು ಆಧುನಿಕ ಜಗತ್ತಿನ ಜ್ಞಾನ ಪ್ರಸರಣದ ಆಕರಗಳಾಗಿವೆ.

7. ಆಧುನಿಕ ಯುಗದ ನಾಗರಿಕ ಸಮಾಜ ಹೊಸ ತಂತ್ರಾಂಶಗಳ ಮೂಲಕ ಜ್ಞಾನ ಪ್ರಸರಣವನ್ನು ಶೀಘ್ರಗತಿಯಲ್ಲಿ ನೆರವೇರಿಸುತ್ತಿರುವುದರ ಕಾರಣ

ಕಾಲ ಕಾಲಕ್ಕೆ ಅನುಗುಣವಾಗಿ ಸುಧಾರಣೆಗೊಳ್ಳುತ್ತಿರುವ ಶಿಕ್ಷಣ ಕ್ಷೇತ್ರ ಮತ್ತು ಶಿಕ್ಷಣ ಸಮಿತಿಗಳ ಶಿಫಾರಸುಗಳಾಗಿವೆ.

ಹೀಗೆ ಪ್ರತಿಯೊಂದು ಶಿಕ್ಷಣ ಸಮಿತಿಗಳ ಪ್ರಾಥಮಿಕ ಉದ್ದೇಶ ಗರಿಷ್ಠ ಮಟ್ಟದ ಸಾಂಸ್ಥಿಕ ರೂಪದ ಜ್ಞಾನ ವಿಸ್ತರಣೆಯಾಗುತ್ತಿರುವುದು ಭಾರತೀಯ ಭವ್ಯ ಜ್ಞಾನ ಪರಂಪರೆಯ ಬೆಳವಣಿಗೆಗೆ ಕಾರಣವಾಗಿವೆ.

**ಉಪಸಂಹಾರ:**

ಭಾರತೀಯ ನಾಗರಿಕ ಸಮಾಜದ ಬೆಳವಣಿಗೆಯೊಂದಿಗೆ ಸಾಮಾಜಿಕ ಕ್ಷೇತ್ರದ ವಿವಿಧ ಅಂಗಗಳು ಸಹ ಬೆಳವಣಿಗೆ ಹೊಂದಲು ಪ್ರಾರಂಭಿಸಿದವು. ಹೀಗೆ ಆಧುನಿಕ ನಾಗರಿಕ ಸಮಾಜ ಹಲವು ವಿದ್ಯಮಾನಗಳಲ್ಲಿ ಭಾರತೀಯ ಜ್ಞಾನಪ್ರಸರಣದ ಪರಂಪರೆಯನ್ನು ಬೆಳೆಸಿಕೊಂಡು ಬರುವಲ್ಲಿ ಶಿಕ್ಷಣ ಕ್ಷೇತ್ರ ಸಮಿತಿಗಳ ಪಾತ್ರ ಅದ್ವಿತೀಯವಾಗಿದೆ. ಸಾಂಪ್ರದಾಯಿಕ ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆ ಇಂದು ತಂತ್ರಜ್ಞಾನಾಧಾರಿತ ಪ್ರಾಯೋಗಿಕ ಶಿಕ್ಷಣ ವ್ಯವಸ್ಥೆಯಾಗಿ ಮಾರ್ಪಟ್ಟಿದ್ದರೂ ಸಹ ಭಾರತೀಯ ಪರಂಪರೆಯ ವ್ಯವಸ್ಥಿತ ರೂಪುರೇಷೆಗಳನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಬರುತ್ತಿರುವುದಾಗಿದೆ. ಬದಲಾಗುತ್ತಿರುವ ನಾಗರೀಕ ಸಮಾಜಕ್ಕೆ ಅನುಗುಣವಾಗಿ ಹಲವು ಶಿಕ್ಷಣ ಸುಧಾರಣೆಗಳನ್ನು ತರುವಲ್ಲಿ ಶಿಕ್ಷಣ ಸಮಿತಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದಲ್ಲಿ ಈ ಭಾರತೀಯ ಜ್ಞಾನ ಪರಂಪರೆಯನ್ನು ಮತ್ತಷ್ಟು ಶ್ರೀಮಂತಗೊಳಿಸಬಹುದಾಗಿದೆ.

**ಆಧಾರಗ್ರಂಥಗಳು:**


1. ಡೀವಿ ಜಾನ್ (1938); ಅನುಭವ ಮತ್ತು ಶಿಕ್ಷಣ. ಕಪ್ಪಾ ಡೆಲ್ಟಾ ಪ್ರೆಸ್.
2. ಬೆಕ್ ರಾಬರ್ಟ್ ಎಚ್. (2009); ಮೂರು ಖ ನ ಪ್ಲಸ್: ಇಂದಿನ ಶಾಲೆಗಳು ಏನು ಮಾಡಲು ಪ್ರಯತ್ನಿಸುತ್ತಿವೆ ಮತ್ತು ಏಕೆ. ಮಿನ್ನೇಸೋಟ ಪ್ರೆಸ್.
3. ಕಪೂರ್ ಕಪಿಲ್ ಮತ್ತು ಸಿಂಗ್ ಅವಧೇಶ್ ಕುಮಾರ್ (1966); ಭಾರತೀಯ ಜ್ಞಾನ ವ್ಯವಸ್ಥೆಗಳ ಸಂಪುಟ 1, ನವ ದೆಹಲಿ.
4. ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ (1959), ಗ್ರಂಥಾಲಯಗಳಿಗೆ ಸಲಹಾ ಸಮಿತಿಯ ವರದಿ, ನವದೆಹಲಿ, ಮ್ಯಾಂಗರ್ ಆಫ್ ಪಬ್ಲಿಕೇಷನ್ಸ್.
5. ಯುಜಿಸಿ (1965), ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜು ಲೈಬ್ರರಿಗಳು, ಯುಜಿಸಿ ಪರಿಶೀಲನಾ ಸಮಿತಿಯ ವರದಿ, ನವ ದೆಹಲಿ.
6. ಜೇಸನ್ ಡಿ ಮತ್ತು ಕೆನ್ನೆತ್ ಕೆ 1993, ಇನ್ಫರ್ಮೇಷನ್ ಟೆಕ್ನಾಲಜಿ ಇನ್ ಇಂಡಿಯಾ, ದಿ ಕ್ವೆಸ್ಟ್ ಫಾರ್ ಸ್ವಾವಲಂಬನೆ, ಏಷ್ಯನ್ ಸರ್ವೆ, ವಿಒಎಲ್. XXXIII, ಮೇ 5.